

# ಐದು ಕೋಟಿಯ ಹಾಡು!

ಆಮೀರ್ ಖಾನ್, ಅಭಿಷೇಕ್ ಬಚ್ಚನ್, ಉದಯ್ ಚೋಪ್ರಾ ಮತ್ತು ಕತ್ರೀನಾ ಕೈಫ್ ಅಭಿನಯದ 'ಧೂಮ್ 3' ಬಿಡುಗಡೆಗೂ ಮುನ್ನವೇ ದಿನಕ್ಕೊಂದು ಹೊಸ ಸುದ್ದಿ ಸೆಟ್‌ನಿಂದ ಹೊರಬೀಳುತ್ತಿದೆ. 'ಧೂಮ್'ನ ಮೊದಲ ಎರಡೂ ಅವತರಣಿಕೆಯಲ್ಲಿ ಹುಚ್ಚೆಬ್ಬಿಸಿದ್ದು ಶೀರ್ಷಿಕೆ ಗೀತೆಗಳು. ಈ ಕಾರಣಕ್ಕಾಗಿಯೇ 'ಧೂಮ್ 3' ಚಿತ್ರತಂಡ ಶೀರ್ಷಿಕೆ ಗೀತೆಯನ್ನು ಮತ್ತಷ್ಟು ವೈಭವಯುತವಾಗಿ ತಯಾರಿಸಿದೆ. ಈಗಾಗಲೇ ಸದ್ದು ಮಾಡುತ್ತಿರುವ ಶೀರ್ಷಿಕೆ ಗೀತೆ 'ಮಲಾಂಗ್' ಹಾಡಿಗೆ ವ್ಯಯಿಸಿರುವ ಮೊತ್ತ ಬರೋಬ್ಬರಿ 5 ಕೋಟಿ ರೂಪಾಯಿಯಂತೆ!

ಈ ಹಾಡಿನಲ್ಲಿ ಅಮೆರಿಕದಿಂದ ಬಂದ ನುರಿತ 200 ಜಿಮ್ನಾಸ್ಟಿಕ್ ಪಟುಗಳು ಕತ್ರೀನಾ ಮತ್ತು ಅಮೀರ್ ಜೊತೆ ಹೆಜ್ಜೆ ಹಾಕಿದ್ದಾರಂತೆ . 'ಧೂಮ್ 2'ನಲ್ಲಿ ಐಶ್ವರ್ಯಾ ರೈ ಹಾಕಿದ ಹೆಜ್ಜೆಗಳನ್ನೂ ಮೀರಿ ಕತ್ರೀನಾ 'ಮಲಾಂಗ್' ಗೀತೆಯಲ್ಲಿ ನರ್ತಿಸಿದ್ದಾರೆ ಎನ್ನಲಾಗುತ್ತಿದೆ. ಯೂ ಟ್ಯೂಬ್‌ನಲ್ಲಿ 'ಧೂಮ್3' ಟ್ರೇಲರ್ ಈಗಾಗಲೇ 12 ದಶಲಕ್ಷ ಹಿಟ್ ಕಂಡಿದೆಯಂತೆ.

ಅಂದ ಹಾಗೆ, ಕತ್ರೀನಾಗೆ ಇದು ಬಿಡುವಿನ ಅವಧಿ. ಹೃತಿಕ್ ರೋಷನ್ ನಟನೆಯ 'ಬ್ಯಾಂಗ್ ಬ್ಯಾಂಗ್' ಚಿತ್ರೀಕರಣ ಮುಂದಕ್ಕೆ ಹೋಗಿದೆ. 'ಜಿಂದಗಿ ನಾ ಮಿಲೇಗಿ ದುಬಾರಾ' ಚಿತ್ರದ ಬಳಿಕ ಕತ್ರೀನಾ ಮತ್ತು ಹೃತಿಕ್ ಒಟ್ಟಿಗೆ ನಟಿಸುತ್ತಿರುವ ಚಿತ್ರವಿದು. ಮೆದುಳಿನಲ್ಲಿ ರಕ್ತ ಹೆಪ್ಪುಗಟ್ಟಿರುವ ಕಾರಣಕ್ಕೆ ಚಿಕಿತ್ಸೆಗೆಂದು ಹೃತಿಕ್ ಅಮೆರಿಕಕ್ಕೆ ತೆರಳಿರುವುದರಿಂದ ಕತ್ರೀನಾಗೆ ಚಿತ್ರೀಕರಣ-ದಿಂದ ಜನವರಿವರೆಗೆ ಬಿಡುವು ಸಿಕ್ಕಿದೆ.

ಹಾಗಂತ, ಕತ್ರೀನಾ ಸುಮ್ಮನೆ ಕುಳಿತಿಲ್ಲ. ಕುಟುಂಬದೊಂದಿಗೆ ಲಂಡನ್ ಸುತ್ತಾಡಿ ಬಂದಿರುವ ಕತ್ರೀನಾ, ಈಗ ಒಂದರ ಮೇಲೊಂದು ಜಾಹೀರಾತು-ಗಳಿಗೆ ಬಣ್ಣ ಹಚ್ಚುತ್ತಿದ್ದಾರೆ. ಬಹುನಿರೀಕ್ಷಿತ 'ಧೂಮ್ 3' ಡಿಸೆಂಬರ್ 20ರಂದು ತೆರೆ ಕಾಣಲು ಸಿದ್ಧತೆ ನಡೆಸಿದೆ. ಹೀಗಾಗಿ ಕತ್ರೀನಾ ಸದ್ಯ ಚಿತ್ರದ ಪ್ರಚಾರದಲ್ಲಿ ಬಿಡುವಿಲ್ಲದೆ ತೊಡಗಿಕೊಳ್ಳುತ್ತಿದ್ದಾರೆ.

■ ಅಮಿ

